ಪಂಚಾಮೃತ

# ಕಾರ್ಯನಿರ್ವಹಣೆ – ೨

**ಕಾ**ರ್ಯಸಾಧನೆಗೆ ಸ್ವಾತಂತ್ರ್ಯ ಅಗತ್ಯವೆಂದೂ, ವ್ಯಕ್ತಿ ಸೃಜನಶೀಲನಾದಾಗ ಮಾಡುವ ಕಾರ್ಯ ಬೇಸರ ತರದೆಂದೂ, ಸಮರ್ಪಕ ನಿರ್ವಹಣೆಯಿಂದ ಯಶಸ್ಸು ಸಾಧ್ಯವೆಂದೂ ಹಿಂದಿನ ಸಂಚಿಕೆಯಲ್ಲಿ ವಿವರಿಸಲಾಗಿದೆ. ನಾವು ಮಾಡುವ ಕೆಲಸಗಳ ಬಗ್ಗೆ ಇಷ್ಟೆಲ್ಲ ಆಳವಾಗಿ ಯೋಚಿಸಬೇಕೇ ಎಂಬ ಪ್ರಶ್ನೆ ಏಳಬಹುದು. ಪ್ರತಿಯೊಂದು ಕ್ರಿಯೆಯೂ ನಮ್ಮ ಜೀವನದ ಒಂದು ಅವಿಭಾಜ್ಯ ಅಂಗವಷ್ಟೇ ಅಲ್ಲ, ಜೀವನದ ಪಯಣದಲ್ಲಿ ಅದು ನಮ್ಮ ವಿಕಾಸಕ್ಕೆ ನಾಂದಿಯಾಗುವ ಒಂದು ಹೆಜ್ಜೆ ಕೂಡ. ಇದರ ಪ್ರಾಮುಖ್ಯಯನ್ನು ಕಂಡುಕೊಳ್ಳದವರು ತಮ್ಮ ಜೀವನದಲ್ಲಿ ಸಾಮರಸ್ಯವನ್ನು ಸಾಧಿಸುವುದರಲ್ಲಿ ವಿಫಲರಾಗುತ್ತಾರೆ ಹಾಗೂ ಜೀವನ–ಕ್ರಿಯೆಗಳ ನಡುವಿನ ಸಂಬಂಧವನ್ನು ತಿಳಿಯದೆ ಅರ್ಥ ಶೂನ್ಯತೆಯನ್ನು ಅನುಭವಿಸುತ್ತಾರೆ. ಯಾವುದನ್ನು ಮಾಡಬೇಕು, ಯಾವಾಗ ಮಾಡಬೇಕು, ಹೇಗೆ ಮಾಡಬೇಕು ಎಂಬ ಗೊಂದಲ, ಸಂದೇಹಗಳಲ್ಲೇ ಸಿಲುಕಿಕೊಂಡು ಸಫಲತೆ ಎನ್ನುವುದು ಕೈಗೆಟುಕದ ಮರೀಚಿಕೆಯೆಂದೇ ಪರಿಗಣಿಸಿ ನಿರಾಶಾಭಾವದಿಂದ ಜಿಗುಪ್ಸೆಗೆ ತುತ್ತಾಗುತ್ತಾರೆ. ಆದ್ದರಿಂದಲೇ ಶ್ರೀಕೃಷ್ಣ ಗೀತೆಯಲ್ಲಿ ಹೇಳುತ್ತಾನೆ: **ಕಿಂ ಕರ್ಮ ಕಿಮಕರ್ಮೇತಿ ಕವಯೋಽಪ್ಯತ್ರ ಮೋಹಿತಾಃ**—ತಿಳಿದವರೂ ಕೂಡ ಯಾವುದನ್ನು ಮಾಡಬೇಕು, ಯಾವುದನ್ನು ಮಾಡಕೂಡದು ಎಂಬ ವಿಷಯದಲ್ಲಿ ವಿಭ್ರಾಂತರಾಗಿದ್ದಾರೆ. **ಗಹನಾ ಕರ್ಮಣೋ ಗತಿಃ**—ಕರ್ಮದ ಗತಿಯನ್ನು ತಿಳಿಯುವುದು ಕಷ್ಟ. ಏಕೆ ಹೀಗೆ ಎಂದು ನಮ್ಮನ್ನು ನಾವು ಪ್ರಶ್ನಿಸಿಕೊಂಡಾಗ ನಮಗೇ ಉತ್ತರ ದೊರೆಯುವುದು. ನಾವು ಜೀವನದಲ್ಲಿ ಏನನ್ನು ಬಯಸುತ್ತೇವೆ ಎಂಬುದರ ಬಗ್ಗೆ ಸ್ಪಷ್ಟ ಕಲ್ಪನೆ ಇಲ್ಲದಿರುವುದೇ ಈ ಎಲ್ಲ ಗೊಂದಲಗಳಿಗೆ ಕಾರಣ. ವಿಭಿನ್ನ ಭಾಗಗಳಾಗಿ ವಿಂಗಡಿಸಿ ಹೋಗಿರುವ ನಮ್ಮ ಜೀವನವನ್ನು ಹಿಡಿದಿಡುವ ಸೂತ್ರವೇ ಜೀವನದ ಲಕ್ಷ್ಯ ಅಥವಾ ಗುರಿ. ಮಾನವ ಏನನ್ನು ಬಯಸಿ ಜೀವಿಸುತ್ತಾನೆ, ಅವನ ಎಲ್ಲ ಕ್ರಿಯೆಗಳ ಭಾವನೆಗಳ ಹಿನ್ನೆಲೆಯಲ್ಲಿರುವ ಮೂಲಭೂತ ಪ್ರಚೋದನೆಗಳಾವುವು ಎಂಬುದನ್ನು ಕುರಿತು ತಿಳಿಯುವುದು ಆವಶ್ಯಕ.

> **ಜೀವನದ ಮಟ್ಟವನ್ನು ಏರಿಸುವುದು ಜೀವನದ ಧ್ಯೇಯವಾಗಲಾರದು. ಜೀವನದಲ್ಲಿ ಸತ್‌ಪ್ರವೃತ್ತಿ, ಸದಾಚಾರಗಳನ್ನು ಬೆಳೆಸುವುದು, ಜೀವನವು ವಿಕಾಸಗೊಳ್ಳುವಂತೆ ಮಾಡುವುದು, ಜೀವನದ ರಹಸ್ಯವನ್ನು ಅರಿತು ಅದನ್ನು ಆನಂದಮಯವಾಗಿಸುವುದು ಇವೇ ಜೀವನದ ಮುಖ್ಯ ಧ್ಯೇಯವಾಗಿರುವುದು ಅಗತ್ಯ.**
>
> —*ರಂಗನಾಥ ದಿವಾಕರ*

ಮನೋವಿಜ್ಞಾನಿಗಳ ಪ್ರಕಾರ ಮಾನವನ ಎಲ್ಲ ಭಾವನೆಗಳಿಗೆ ಅವನಲ್ಲಿರುವ ಮೂಲಭೂತ ಪ್ರಚೋದಕ ಶಕ್ತಿಗಳೇ ಕಾರಣ. ಇವನ್ನು ಅವರು primary urges—ಮೂಲ ಪ್ರಚೋದನೆಗಳು ಎಂದು ಕರೆದಿರುತ್ತಾರೆ. ನಾವು ಅನುಭವಿಸುವ ಪ್ರೀತಿ, ದ್ವೇಷ, ಈರ್ಷ್ಯೆ, ಮತ್ಸರ, ಕೋಪ, ಕರುಣೆಗಳೆಲ್ಲ ಈ ಮೂಲಭೂತ ಪ್ರಚೋದನೆಗಳಿಂದ ಹುಟ್ಟಿದವು. ಪ್ರಚೋದಕ ಶಕ್ತಿಗಳು ಯಾವುವು, ಎಷ್ಟು ಎಂಬುದರ ಬಗ್ಗೆ ವಿಭಿನ್ನ ಸಿದ್ಧಾಂತಗಳಿವೆಯಾದರೂ ವಿಜ್ಞಾನಿಗಳೆಲ್ಲರೂ ಒಂದು ವಿಷಯವನ್ನು ಒಪ್ಪುತ್ತಾರೆ. ದೇಶ-ಕಾಲ ಅಥವಾ ವಯಸ್ಸಿನ ವ್ಯತ್ಯಾಸಗಳಿದ್ದರೂ ಈ ಮೂಲಭೂತ ಪ್ರಚೋದನೆಗಳು ಎಲ್ಲ ಮಾನವರಲ್ಲೂ ಸರ್ವೇಸಾಮಾನ್ಯವೆಂದು ಅವರೆಲ್ಲರೂ ಒಕ್ಕೊರಲಿನಿಂದ ಹೇಳುತ್ತಾರೆ. ಬಾಹ್ಯ ಪ್ರಪಂಚದ ಅನುಭವಗಳಿಗೆ ನಾವು ಹೇಗೆ ಪ್ರತಿಕ್ರಿಯಿಸುತ್ತೇವೆ ಎಂಬುದು ಈ ಪ್ರಚೋದಕ ಶಕ್ತಿಗಳನ್ನು ಅವಲಂಬಿಸಿದೆ. ನಮ್ಮ ಕಲಿಕೆ ಹಾಗೂ ಮನೋವಿಕಾಸವೂ ಕೂಡ ಈ ಶಕ್ತಿಗಳನ್ನು ಅವಲಂಬಿಸಿದೆ. ಆದ್ದರಿಂದ ನಮ್ಮ ಜೀವನವನ್ನು, ನಮ್ಮ ನಡೆನುಡಿ, ಭಾವನೆಗಳನ್ನು ನಿಯಂತ್ರಿಸುವ ಈ ಶಕ್ತಿಗಳ ಪರಿಚಯ ಬಹಳ ಆವಶ್ಯಕ. ಇವುಗಳ ಪರಿಚಯವಾದಾಗ ಅವನ್ನು ಸಕಾರಾತ್ಮಕವಾಗಿ ಬಳಸಿಕೊಂಡು ಯಶಸ್ಸು, ಸುಖ, ನೆಮ್ಮದಿಗಳನ್ನು ಪಡೆಯು ವುದು ಸಾಧ್ಯವಾಗುತ್ತದೆ. ಈ ಶಕ್ತಿಗಳನ್ನು ನಾವು ಪ್ರತ್ಯೇಕವಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರೂ ಅವು ಪರಸ್ಪರ ಸಂಬಂಧಿತ ಹಾಗೂ ಒಳಸಂಪರ್ಕವನ್ನು ಹೊಂದಿವೆ ಎಂಬುದು ನಿಜ. ಪ್ರತಿಯೊಬ್ಬರಲ್ಲೂ ನಾವು ಐದು ಮೂಲ ಭೂತ ಪ್ರಚೋದನೆಗಳನ್ನು ಗುರುತಿಸಬಹುದಾದರೂ ಅವುಗಳನ್ನು ಸಮಗ್ರವಾಗಿ ಆಲೋಚಿಸುವುದೂ ಅಷ್ಟೇ ಆವಶ್ಯಕ. ಕುಂಬಾರನು ಜೇಡಿ ಮಣ್ಣನ್ನು ಹದಗೊಳಿಸಿ ಅದ ರಿಂದ ಬೇಡದ ಕಸಕಡ್ಡಿಗಳನ್ನು ತೆಗೆದುಹಾಕಿ, ಶ್ರಮದೊಂದಿಗೆ ಕಲಾನೈಪುಣ್ಯವನ್ನು ಸೇರಿಸಿ ಸುಂದರ ಕಲಾತ್ಮಕ ವಸ್ತುಗಳನ್ನು ತಯಾರಿಸುತ್ತಾನೆ. ಮಣ್ಣಿಗೆ ಬೆಲೆಯಿಲ್ಲದಿದ್ದರೂ ಕುಂಬಾರನ ಕೈಚಳಕದಿಂದ, ಕಾರ್ಯ ಪ್ರಭಾವದಿಂದ ಆಕಾರ ಪಡೆದ ಅದೇ ಮಣ್ಣು ಅಮೂಲ್ಯ

ವಾಗುತ್ತದೆ. ಹೀಗೆ ನಮ್ಮಲ್ಲಿರುವ ಪ್ರಚೋದಕ ಶಕ್ತಿಗಳನ್ನು ಎಚ್ಚರಿಕೆಯಿಂದ ಬಳಸಿಕೊಂಡಾಗ, ತಾಳ್ಮೆ, ಸಾಧನೆಗಳಿಂದ ಸಂಸ್ಕರಿಸಿದಾಗ, ವ್ಯಕ್ತಿತ್ವವು ರೂಪುಗೊಂಡು ಶೋಭಿಸುತ್ತದೆ. **(ಮುಖಪುಟದ ಚಿತ್ರ ನೋಡಿ.)**

**೧. ಆತ್ಮರಕ್ಷಣೆ:**

ಇದು ಮೊದಲ ಮೂಲಭೂತ ಪ್ರಚೋದನೆ. ಪ್ರತಿಯೊಂದು ಜೀವಿಯೂ ತಾನು ಬದುಕಬೇಕೆಂದು ಬಯಸುತ್ತದೆ. ಪ್ರಾಣಿಯಿಂದ ಹಿಡಿದು ಸಣ್ಣ ಕ್ರಿಮಿಯೂ ಕೂಡ ಈ ಮೂಲಭೂತ ಪ್ರಚೋದನೆಯನ್ನು ಹೊಂದಿರುತ್ತದೆ. ಸಣ್ಣ ಮಗುವೂ ಕೂಡ ಪರಿಸರ, ತಂದೆ-ತಾಯಿಯರ ಅರಿವಿಗಿಂತ ಮೊದಲೇ ಈ ಜೀವಿಸುವ ಬಯಕೆಯನ್ನು ಅಳುವುದರ ಮೂಲಕ ಹಾಗೂ ಆಹಾರವನ್ನು ಬಯಸುವುದರ ಮೂಲಕ ವ್ಯಕ್ತಪಡಿಸುತ್ತದೆ. ನಾವು ಅನುಭವಿಸುವ ಆತಂಕ, ಭಯ, ಸಂಶಯವೇ ಮೊದಲಾದ ಭಾವನೆಗಳಿಗೆ ಈ ಪ್ರಚೋದನೆಯೇ ಕಾರಣ. ಪ್ರತಿಯೊಬ್ಬ ಮಾನವನೂ ಜೀವನೋಪಾಯಕ್ಕಾಗಿ ದುಡಿಯುವುದು, ವಿದ್ಯೆ ಗಳಿಸುವುದು, ಸಮಸ್ಯೆಗಳನ್ನು ಎದುರಿಸಿ ಮುಂದುವರಿಯಲು ಬಯಸುವುದು ಇದರ ಪ್ರಭಾವದಿಂದಲೇ. ಈ ಪ್ರಚೋದನೆ ಎಲ್ಲರಲ್ಲೂ ಕಂಡುಬರುವುದಾದರೂ, ಇದನ್ನು ನಮ್ಮ ಉನ್ನತಿಗಾಗಿ ಬಳಸಿಕೊಳ್ಳುವುದರ ಜೊತೆಗೆ, ನನ್ನಂತೆ, ಮಾನವರೂ ಸೇರಿದಂತೆ ಇತರ ಪ್ರಾಣಿವರ್ಗಕ್ಕೂ ಜೀವಿಸುವ ಬಯಕೆ ಇದೆ ಎಂಬುದನ್ನು ಮನವರಿಕೆ ಮಾಡಿಕೊಂಡರೆ ಉತ್ತಮ ವ್ಯಕ್ತಿಯಾಗಲು ಸಾಧ್ಯ. ಈ ಮೂಲಭೂತ ಪ್ರಚೋದನೆಯಿಂದ ಉಂಟಾಗುವ ನಿಷೇಧಾತ್ಮಕವಾದ ಆತಂಕ, ಭಯಗಳನ್ನು ಗೆಲ್ಲಲು ಅನುಸರಿಸಬೇಕಾದ ಮಾರ್ಗೋಪಾಯಗಳು ಆತ್ಮಶ್ರದ್ಧೆ, ಕಷ್ಟಗಳನ್ನು ಎದುರಿಸುವ ಧೀರ ಮನೋಭಾವ, ವ್ಯಾಯಾಮಾದಿಗಳಿಂದ ದೇಹವನ್ನು ಶಕ್ತಿಯುತಗೊಳಿಸಿಕೊಳ್ಳುವುದು ಹಾಗೂ ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳುವುದು. ಆಗ ಇದರ ಪರಿಮಿತಿಯನ್ನು ಮೀರಿ ನಿಲ್ಲುವ ಧೀರತನ ನಮ್ಮದಾಗುತ್ತದೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ವೀರರಲ್ಲಿ ಇಂತಹ ಧೀರತನ ಇದ್ದಿರಬೇಕು. ಜೀವಭಯವೇ ಅತ್ಯಂತ ಪ್ರಬಲವಾದ ಭಾವನೆ. ಕೆಲಸದಲ್ಲಿ ವಿಫಲನಾಗಬಹುದು, ಕಷ್ಟವಿರಬಹುದು, ಅಪಾಯವಿರಬಹುದು ಎಂದು ಭಯಪಟ್ಟು ಮುಂದಿರುವ ಕೆಲಸವನ್ನು ಸಮರ್ಪಕವಾಗಿ ಕೈಗೊಳ್ಳದವರು ಅನೇಕರು. ಗುರಿ ಅಥವಾ ಆದರ್ಶದಲ್ಲಿ ಶ್ರದ್ಧೆ ಮತ್ತು ಒಲವು ಇದ್ದಾಗ ಮಾತ್ರ ಈ ಜೀವಭಯವನ್ನು ಗೆಲ್ಲಲು ಸಾಧ್ಯವಾಗುತ್ತದೆ. ಒಬ್ಬ ವ್ಯಕ್ತಿಯು ತನ್ನ ಕಾರ್ಯದಲ್ಲಿ ಪರಿಣತಿಯನ್ನು ಪಡೆಯಬೇಕಾದರೆ ಈ ಕಷ್ಟಸಾಧ್ಯತೆಯನ್ನು **(risk factor)** ಎದುರಿಸಲೇಬೇಕು.

ಜಗತ್ತು ಎಷ್ಟು ವಿಚಿತ್ರವಾಗಿದೆ! ಎಂಥ ಕಷ್ಟ ಬಂದರೂ, ಎಂಥ ಆಪತ್ತು ಎದುರಾದರೂ ಯಾರಿಗೂ 'ಬದುಕು ಸಾಕು' ಎನಿಸುವುದಿಲ್ಲ, 'ಸಾವು ಬೇಕು' ಎನಿಸುವುದಿಲ್ಲ. ಯಾವುದೇ ಪ್ರಾಣಿಗಾದರೂ ಸರಿಯೇ, ಬದುಕಿಗಿಂತಲೂ ಪ್ರಿಯವಾದ ಇನ್ನೊಂದು ವಸ್ತು ಈ ಜಗತ್ತಿನಲ್ಲಿ ಇಲ್ಲ.

*–ಬಾಣಭಟ್ಟ*

**೨. ಆತ್ಮಾಭಿವ್ಯಕ್ತಿ:**

ಒಂದು ಜೀವಿ ಕೇವಲ ಬದುಕುವಷ್ಟರಿಂದಲೇ ತೃಪ್ತಿ ಹೊಂದುವುದಿಲ್ಲ. ತನ್ನಲ್ಲಿರುವ ಭಾವನೆಗಳನ್ನು ವ್ಯಕ್ತಪಡಿಸಲು ಬಯಸುತ್ತದೆ. ಆದ್ದರಿಂದ ಇಂತಹ ಅಭಿವ್ಯಕ್ತಿಗಾಗಿ ಭಾಷೆ, ಸಂಜ್ಞೆಗಳನ್ನು ಬಳಸಿ ಸ್ವಂತಿಕೆಯನ್ನು ಸ್ಥಾಪಿಸಿಕೊಳ್ಳುತ್ತದೆ. ಕಾಮಪ್ರಚೋದನೆಯೇ ಮೂಲಭೂತ ಪ್ರೇರಣೆಯೆಂದು ಜೀವಶಾಸ್ತ್ರದ ವಿಜ್ಞಾನಿಗಳು ಕಳೆದ ಕೆಲವು ದಶಕಗಳವರೆಗೂ ಭಾವಿಸಿದ್ದರು. ಹಕ್ಕಿಗಳ ಕಲರವ, ಅವುಗಳ ರೆಕ್ಕೆಗಳ ಬಣ್ಣಬಣ್ಣದ ರಂಗು ಇವೆಲ್ಲ ಈ ಕಾಮದ ಪ್ರಭಾವದಿಂದಲೇ ಎಂದು ನಂಬಿದ್ದರು. ಇತ್ತೀಚಿನ ಸಂಶೋಧನೆಗಳಿಂದ ಕಾಮಕ್ಕಿಂತಲೂ ಹೆಚ್ಚಾಗಿ ತನ್ನಲ್ಲಿರುವ ಪ್ರತ್ಯೇಕತೆ ಮತ್ತು ವಿಶೇಷತೆಗಳನ್ನೂ ಪ್ರಾಣಿಯು ಅಭಿವ್ಯಕ್ತಗೊಳಿಸಲು ಶ್ರಮಿಸುತ್ತದೆ ಎಂದು ತಿಳಿದು ಬಂದಿದೆ. ಇದನ್ನು ಹಿಂದಿನ ಸಂಚಿಕೆಯಲ್ಲಿ ಸೃಜನಶೀಲತೆ ಶೀರ್ಷಿಕೆಯಲ್ಲಿ ಚರ್ಚಿಸಲಾಗಿದೆ. ಮಾನವನು ಆತ್ಮಾಭಿವ್ಯಕ್ತಿಗೆ ಅನುಕೂಲವಾದ ಪರಿಸರವನ್ನು ಬಯಸುವುದು, ಸ್ವಾತಂತ್ರ್ಯವನ್ನು ಬಯಸುವುದು, ಇವೆಲ್ಲ ಇದರ ಪ್ರಭಾವದಿಂದಲೇ. ಆಕ್ರಮಣ, ದಬ್ಬಾಳಿಕೆ, ಜಗಳಗಂಟಿತನ, ವಿಧೇಯತೆ, ನಮ್ರತೆಗಳು ಇದರಿಂದ ಜನಿಸುವ ಪ್ರವೃತ್ತಿಗಳು. ತನ್ನ ಸ್ವಂತಿಕೆಯನ್ನು ಮೆರೆಯಲು ಇತರರ ಆಸಕ್ತಿಗಳನ್ನು ಕಡೆಗಣಿಸುವುದು, ಹಾನಿಯುಂಟುಮಾಡುವುದು, ಮೋಸ-ವಂಚನೆಗಳ ಮೂಲಕ ಸ್ವಪ್ರತಿಷ್ಠೆಯನ್ನು ಮೆರೆಸುವುದು, ಇವೆಲ್ಲ ಇದರ ನಕಾರಾತ್ಮಕ ಫಲಗಳು. ಅಂತೆಯೇ ನಮ್ಮ ಮಿತಿಯನ್ನು ಅರಿತುಕೊಂಡು ಇತರರ ಗುಣಗಳನ್ನು ಗೌರವಿಸುವ ಸಕಾರಾತ್ಮಕ ವಿನಯ, ಶ್ರದ್ಧೆಯಂತಹ ಗುಣಗಳಿಗೂ ಇದೇ ಕಾರಣ. ಒಬ್ಬ ವ್ಯಕ್ತಿ ತನ್ನ ಕಾರ್ಯಕ್ಷೇತ್ರದಲ್ಲಿ ಸಫಲತೆಯನ್ನು ಬಯಸುವುದು ಈ ಆತ್ಮಾಭಿವ್ಯಕ್ತಿಯ ಪ್ರಭಾವದಿಂದಲೇ. ಅತಿಯಾಸೆ, ಕ್ರೂರ ಸ್ಪರ್ಧೆಗಳನ್ನು ಈ ಪ್ರವೃತ್ತಿ ಜಾಗೃತಗೊಳಿಸಬಹುದು. ನೈತಿಕತೆ ಹಾಗೂ ಮೌಲ್ಯಗಳ ಬಲದಿಂದ ಈ ದುಷ್ಪರಿಣಾಮಗಳಿಂದ ಪಾರಾಗುವ ಕಲೆಯನ್ನು ಕಲಿಯುವುದು ಆವಶ್ಯಕ.

**೩. ಕಾಮ:**

ಈಗಾಗಲೇ ಹೇಳಿರುವಂತೆ ಇದೊಂದು ಅತ್ಯಂತ ಪ್ರಮುಖವೂ ಪ್ರಬಲವೂ ಆದ ಪ್ರಚೋದನೆ. ಜೀವಿಯ ಎಲ್ಲ ಕ್ರಿಯೆಗಳನ್ನೂ ಇದು ನಿಯಂತ್ರಿಸುತ್ತದೆ ಎಂದು ಹಿಂದೆ

**ನೀತಿಯೆಂಬುದು ಸಾಧಿಸಬೇಕಾದ ಧರ್ಮವೇ ಹೊರತು ಸಹಜವಾದ ಗುಣವಲ್ಲ.**

*— ರಾಳ್ಳಪಲ್ಲಿ ಅನಂತಕೃಷ್ಣ ಶರ್ಮ*

ತಿಳಿಯಲಾಗಿತ್ತು. ಆದರೆ ಈಗ ಈ ಸಿದ್ಧಾಂತವನ್ನು ಕೈಬಿಡಲಾಗಿದೆ. ನೈಸರ್ಗಿಕವಾದ ಪ್ರಜನನ ಶಕ್ತಿಯಿಂದ ಪ್ರಾಣಿಯು ತನ್ನನ್ನು ತನ್ನ ಸಂತಾನದ ಮೂಲಕ ಉಳಿಸಿಕೊಳ್ಳಲು ಬಯಸುತ್ತದೆ. ವಂಶವೃದ್ಧಿಯು ಆಗಬೇಕು, ಅಷ್ಟೇ ಅಲ್ಲ, ಉತ್ತಮಗೊಳ್ಳುತ್ತ ಹೆಚ್ಚಿನ ಶಕ್ತಿ-ಸಾಮರ್ಥ್ಯಗಳನ್ನು ಗಳಿಸಿಕೊಂಡು ಶಾಶ್ವತವಾಗಬೇಕು ಎಂದು ಪ್ರತಿಯೊಂದು ಪ್ರಾಣಿಯೂ ಬಯಸುತ್ತದೆ. ತನ್ನ ಮರಿಗಳಲ್ಲಿ ದುರ್ಬಲವಾಗಿರುವ ಮರಿಯಿದ್ದರೆ ನಿರ್ದಾಕ್ಷಿಣ್ಯವಾಗಿ ಅದಕ್ಕೆ ಆಹಾರ ಆರೈಕೆಗಳನ್ನು ನೀಡದೆ, ಅದನ್ನು ಸಾಯಿಸುವ ಪ್ರಾಣಿಪಕ್ಷಿಗಳ ನಿಸರ್ಗ ನಿರ್ಮಿತ ವ್ಯವಹಾರ ಕಠೋರವೆಂದೆನಿಸಿದರೂ ಜೀವನದ ಹೋರಾಟದಲ್ಲಿ ಅದು ಆವಶ್ಯಕವೂ ಕೂಡ. ನಮ್ಮ ದೈಹಿಕ ಸಾಮರ್ಥ್ಯವನ್ನು ರೂಪಿಸುವ ವಂಶವಾಹಿಗಳು (genes) ದೋಷಯುಕ್ತವಾಗಿದ್ದರೆ ಮುಂದಿನ ಪೀಳಿಗೆ ಶಕ್ತಿಯುತವಾಗಿರುವುದಿಲ್ಲವೆಂಬ ಅರಿವು ಪ್ರಾಣಿಗಳಿಗೆ ಬುದ್ಧಿಪೂರ್ವಕವಾಗಿ ಬಂದಿಲ್ಲವಾದರೂ ಸ್ವಭಾವ ಸಹಜವಾಗಿ ಅವಕ್ಕೆ ಆ ತಿಳಿವಳಿಕೆ ಇರುತ್ತದೆ. ಮಾನವನು ದಯೆ, ಕರುಣೆ, ಸಂಯಮದಂತಹ ಗುಣಗಳಿಂದ ಈ ಕಾಮಪ್ರಚೋದಕ ಪ್ರವೃತ್ತಿಯನ್ನು ನಿಗ್ರಹಿಸುವಲ್ಲಿ ಯಶಸ್ವಿಯಾಗಿದ್ದಾನೆ.

ಮಾನವನು ಕಾಮವನ್ನು ನಿಗ್ರಹಿಸಬೇಕೆಂದು ಎಲ್ಲ ಧರ್ಮಗಳೂ ತಿಳಿಸುತ್ತವೆ. ದೇಹಭಾವನೆಯನ್ನೇ ಪ್ರಬಲಗೊಳಿಸಿ ಸೃಜನಾತ್ಮಕ ಶಕ್ತಿಯನ್ನು ಕೇವಲ ದೈಹಿಕ ಮಟ್ಟಕ್ಕೇ ಇಳಿಸುವ ಈ ಪ್ರವೃತ್ತಿಯನ್ನು ನಿಗ್ರಹಿಸಿದಾಗ ಸೂಕ್ಷ್ಮ ವಿಚಾರಗಳನ್ನು ಗ್ರಹಿಸುವ ಧೀಶಕ್ತಿ ಜಾಗೃತವಾಗುವುದು ಎಂದು ಹಿಂದೂ ಶಾಸ್ತ್ರಗಳೆಲ್ಲವೂ ಸಾರುತ್ತವೆ. ಕಾಮನಿಗ್ರಹವಿಲ್ಲದೆ ಉತ್ತಮ ಜೀವನ ಸಾಧ್ಯವೇ ಇಲ್ಲ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಕಾಮದ ಪ್ರಭಾವದಿಂದಾಗಿ ಮಾನವನಲ್ಲಿ ಕಂಡುಬರುವ ಪ್ರೀತಿ, ಸಹಾನುಭೂತಿ, ಮಮತೆ, ಅಸೂಯೆ, ದ್ವೇಷಗಳು ಪರಸ್ಪರ ಸಂಬಂಧಗಳಲ್ಲಿ ವ್ಯಕ್ತವಾಗಿ, ಕೆಲವೊಮ್ಮೆ ಘರ್ಷಣೆಗಳಿಗೆ ಕಾರಣವಾಗಿ, ಜೀವನವನ್ನು ಕ್ಲಿಷ್ಟವಾಗಿಸುತ್ತವೆ. ನೈಸರ್ಗಿಕವಾದ ಇತರ ಪ್ರಚೋದನೆಗಳನ್ನು ನಿಯಂತ್ರಿಸಿ ಉತ್ತಮಿಕೆಯನ್ನು ಸಾಧಿಸುವಂತೆ ಇದನ್ನೂ ನಮ್ಮ ಸಂಕಲ್ಪ ಶಕ್ತಿಯ ದೃಢತೆಯ ಸಹಾಯದಿಂದ ಪರಿಶುದ್ಧಗೊಳಿಸಬೇಕು. ಜೀವನಪರ್ಯಂತ ಕಾಮದೃಷ್ಟಿಯೇ ನಮ್ಮನ್ನು ಆಳಿದರೆ ನಾವು ಪ್ರಾಣಿಗಳಿಗಿಂತ ಕೀಳಾಗುತ್ತೇವೆ. ಅಷ್ಟೇ ಅಲ್ಲ, ಕುಂಠಿತ ವ್ಯಕ್ತಿತ್ವವುಳ್ಳ ಮಾನಸಿಕ ರೋಗಿಗಳಾಗುತ್ತೇವೆ.

ತಂದೆತಾಯಿಯರು ತಮ್ಮ ಮಕ್ಕಳಲ್ಲಿ ಹೇಗೆ ಕಾಮಿತರಾಗುವುದಿಲ್ಲವೋ ಹಾಗೆಯೇ ವ್ಯಕ್ತಿಗಳೂ ಕೂಡ ಪಾರಸ್ಪರಿಕ ಸಂಬಂಧಗಳಲ್ಲಿ ಶುದ್ಧ ಭಾವನೆಯನ್ನು ತಂದುಕೊಳ್ಳಲು ಸಾಧ್ಯವಾದಾಗ, ಸಮಾಜದಲ್ಲಿ ನೈತಿಕತೆ ದೃಢವಾಗುತ್ತದೆ. ಇಂದಿನ ದಿನಪತ್ರಿಕೆಗಳಲ್ಲಿ ಪ್ರತಿನಿತ್ಯವೂ ಕಾಣುತ್ತಿರುವ ಸ್ತ್ರೀಯರ ಶೋಷಣೆ ಹಾಗೂ ಕಾರ್ಯಕ್ಷೇತ್ರದಲ್ಲಿ ಅವರಿಗೆ ಆಗುವ ಅವಮಾನ, ದೌರ್ಜನ್ಯಗಳು ಪ್ರಗತಿಪರ ಸಮಾಜದ ಲಕ್ಷಣಗಳಲ್ಲ, ಹಳಿ ತಪ್ಪುತ್ತಿರುವ ನಾಗರಿಕತೆಯ ಗುರುತುಗಳು. ಅನೇಕ ರಾಷ್ಟ್ರಗಳಲ್ಲಿ ಪುರುಷರಿಗೇ ಮೀಸಲಾಗಿದ್ದ ಅನೇಕ ಕಾರ್ಯಗಳನ್ನು ಮಹಿಳೆಯರು ಯಶಸ್ವಿಯಾಗಿ ನಿಭಾಯಿಸುತ್ತಿದ್ದಾರೆ. ಆಧುನಿಕ ಪುರುಷರಿಗಿಂತ ಹೆಚ್ಚಿನ ಶ್ರದ್ಧೆಯನ್ನು ತಮ್ಮ ಕಾರ್ಯಕ್ಷೇತ್ರಗಳಲ್ಲಿ ತೋರುತ್ತಿದ್ದಾರೆ. ಸಮಾನ ಹಕ್ಕುಗಳಿಗಾಗಿ ಇಂದು ಮಹಿಳೆ ಹೋರಾಡುತ್ತಿದ್ದಾಳೆ. ಸ್ತ್ರೀಯಾಗಲಿ, ಪುರುಷನಾಗಲಿ ಕಾರ್ಯಕ್ಷೇತ್ರದಲ್ಲಿ ಯಶಸ್ವಿಯಾಗಲು ಈ ನೈಸರ್ಗಿಕ ಮೂಲಭೂತ ಪ್ರಚೋದನೆಯನ್ನು ಹತ್ತಿಕ್ಕಿ ವರ್ತಿಸಬೇಕಾಗುತ್ತದೆ.

ಪ್ರಕೃತಿಯ ಬಂಧನದಿಂದ ಮುಕ್ತನಾಗಿ, ಪಶುವಿನ ಮಟ್ಟದಿಂದ ಮಾನವನಾಗಿ ಮುಂದುವರಿದು ಶಿವನಾಗುವುದೇ ಮಾನವನ ಗುರಿ. ಶಿವನನ್ನು ಪಶುಪತಿ—ಪಶುಪ್ರವೃತ್ತಿಯನ್ನು ನಿಗ್ರಹಿಸಿರುವವನು—ಎಂದು ಕರೆಯಬಹುದು. ಕಾಮವನ್ನು ಸುಟ್ಟು ಭಸ್ಮಮಾಡಿದ, ಅದನ್ನೇ ಭೂಷಣವನ್ನಾಗಿ ಧರಿಸಿದ ಶಿವನಂತೆ ನಮ್ಮ ವ್ಯಕ್ತಿತ್ವದಲ್ಲಿ ಈ ಕಾಮವನ್ನು ಸಕಾರಾತ್ಮಕವಾಗಿ ಬಳಸಿಕೊಂಡು ಪ್ರೀತಿ, ಮಮತೆಗಳನ್ನು ಎಲ್ಲರಲ್ಲಿಯೂ ವಿಸ್ತರಿಸಿದಾಗ ಪರಿಪೂರ್ಣತೆ ನಮ್ಮದಾಗುತ್ತದೆ.

**ಆಸೆಯೆನ್ನುವುದು ಮನುಷ್ಯನ ಬಡತನ, ಸಿರಿತನಗಳ ಮೇಲೆ ಅವಲಂಬಿತವಾಗಿಲ್ಲ. ಮನುಷ್ಯನಲ್ಲಿ ಯಾವುದು ಇಲ್ಲವೆಂದರೂ ಆಸೆ ಇದ್ದೇ ಇರುತ್ತದೆ. ಜೀವನದಲ್ಲಿ ಆಸೆ ಇದೆಯೆನ್ನುವ ಕಾರಣದಿಂದಲೇ ಪ್ರಯತ್ನ ಇರುತ್ತದೆ. ಬಲವತ್ತರವಾದ ಆಸೆಯೇ ಫಲಸಿದ್ಧಿಯನ್ನು ತಂದುಕೊಡುತ್ತದೆ.** —ಪಾಟೀಲ ಪುಟ್ಟಪ್ಪ

೪. **ಸಂಗ ಪ್ರವೃತ್ತಿ** :

ಮಾನವ ಏಕಾಂಗಿಯಾಗಿ ಬದುಕಲು ಬಯಸುವುದಿಲ್ಲ. ಅವನು ಇತರ ಮಾನವರ ಸಂಗವನ್ನು ಬಯಸುತ್ತಾನೆ, ಅವನು ಸಂಘಜೀವಿ. ಜನರೊಂದಿಗೆ ಬೆರೆಯಬೇಕು, ತನ್ನ ವಿಚಾರಗಳನ್ನು ಇತರರಿಗೆ ತಿಳಿಸಬೇಕು, ಇತರರನ್ನು ತಾನು ತಿಳಿಯಬೇಕು ಎಂದು ಅವನು ಬಯಸುತ್ತಾನೆ. ಅದಕ್ಕೆ ಪೂರಕವಾಗಿ ಅವನು ಕಾವ್ಯ, ನಾಟ್ಯ, ಕಲೆಗಳನ್ನು ರೂಢಿಸಿಕೊಂಡು ತನ್ನ ಭಾವನೆಗಳನ್ನು ವ್ಯಕ್ತಪಡಿಸುತ್ತಾನೆ. ತನ್ನ ಭಾವನಗಳನ್ನು

ವ್ಯಕ್ತಪಡಿಸಲಾಗದೆ ಹೋದರೆ ಪ್ರೀತಿ, ಸಹಾನುಭೂತಿಗಳು ದೊರೆಯದಿದ್ದರೆ, ಉಸಿರುಕಟ್ಟಿದಂತಾಗಿ ಮಾನಸಿಕ ಒತ್ತಡ ಕ್ಕೊಳಗಾಗುತ್ತಾನೆ. ತಪ್ಪಿತಸ್ಥರನ್ನು ಜನಸಂಪರ್ಕದಿಂದ ದೂರ ವಿಟ್ಟು ಬಹಿಷ್ಕಾರ ಹಾಕುವುದು ಒಂದು ಶಿಕ್ಷೆಯ ಕ್ರಮವಾದದ್ದು ಇವರಿಂದಲೇ. ಈ ಸಂಗ, ಒಡನಾಟ ಬಯಸುವ ಪ್ರವೃತ್ತಿಗೆ ಪೋಷಣೆ ಸಿಗದಿದ್ದಾಗ ವ್ಯಕ್ತಿ ನಿರಾಶೆ, ದುಃಖಗಳನ್ನು ಅನುಭವಿಸುವುದಷ್ಟೇ ಅಲ್ಲ, ಕ್ರಮೇಣವಾಗಿ ಇದು ದ್ವೇಷ, ಹಿಂಸೆ, ಕ್ರೌರ್ಯಗಳಂತಹ ಅಹಿತಕರ ಭಾವನೆಗಳಿಗೆ ದಾರಿ ಯಾಗುತ್ತದೆ. ಇಂದಿನ ಕಾರ್ಯಕ್ಷೇತ್ರದಲ್ಲಿ ಸಹಕಾರ, ಸಹಬಾಳ್ವೆ ಬಹಳ ಪ್ರಧಾನವಾಗಿದೆ. ಸಮುದಾಯಜೀವನದ ಗೃಹ ಸಮುಚ್ಚಯಗಳು, ನೌಕರರ ಸಹಾಯಸಂಸ್ಥೆಗಳು ಇಂದು ಎಲ್ಲೆಡೆ ಕಂಡುಬರುತ್ತಿದ್ದು ಜಾಗತೀಕರಣ ಹಾಗೂ ವಿಶ್ವಕುಟುಂಬಿ ಭಾವನೆಗಳನ್ನು ಮಾನವ ಗ್ರಹಿಸುತ್ತಿದ್ದಾನೆ. ಇದನ್ನು ಸ್ವಾಮಿ ವಿವೇಕಾನಂದರು ಬಹಳ ಹಿಂದೆಯೇ ಕಂಡುಕೊಂಡು ಸಂಘಶಕ್ತಿಯ ಗುಣಗಳನ್ನು ಹಾಡಿ ಹೊಗಳಿ ದ್ದಾರೆ. ವ್ಯಕ್ತಿಯು ತನ್ನಲ್ಲಿರುವ ನ್ಯೂನತೆಗಳನ್ನು ಇತರರಲ್ಲಿರುವ ಗುಣಗಳಿಂದ ಅತಿಕ್ರಮಿಸಿ ಬೆಳೆಯಲು ಸಂಘ, ಸಂಸ್ಥೆಗಳು ಅವಕಾಶ ಕಲ್ಪಿಸಿಕೊಡುತ್ತವೆ. ಮತ್ತೊಂದೆಡೆ ಈ ಪ್ರವೃತ್ತಿಯನ್ನು ಕೆಟ್ಟ ಉದ್ದೇಶಗಳಿಗೆ ಬಳಸಿ ಬೆಳೆದಂತಹ ವಿವಿಧ ಕೋಮು, ಧರ್ಮ, ಜನಾಂಗ ಅಥವಾ ಜಾತಿ ಎಂಬ ಗುಂಪುಗಳು ಎಷ್ಟು ಸಮಸ್ಯೆಗಳಿಗೆ ಕಾರಣವಾಗಿವೆ! ಸಂಗಪ್ರವೃತ್ತಿ ನಮ್ಮ ಬದುಕನ್ನು ಸಂಕೀರ್ಣಗೊಳಿಸಿದರೆ ಅದು ನಮ್ಮ ವಿಕಾಸಕ್ಕೆ ಅಡ್ಡಿಯಾದಂತೆಯೇ. ಗುಂಪು, ಪಂಗಡಗಳ ಭಾವನೆಯು ಸಂಪರ್ಕ ಬಯಕೆಯ ಉತ್ತಮ ಗುರಿಯಲ್ಲ. ಇದೊಂದು ದಾರಿತಪ್ಪಿದ ನಡತೆ—ತನ್ನ ಮತದೊಂದಿಗೆ, ಭಾವನೆಗಳೊಂದಿಗೆ ಮಾತ್ರ ಸಹಾನುಭೂತಿಯನ್ನು ತೋರಿಸುವ ಅಥವಾ ಬಲಾತ್ಕಾರದಿಂದ ತನ್ನ ಮತಕ್ಕೆ ಪರಿವರ್ತಿಸಲ್ಪಟ್ಟ ವ್ಯಕ್ತಿ ಗಳೊಂದಿಗೆ ಸೇರಿಕೊಂಡು ಸಂಕುಚಿತ ಭಾವನೆ, ನಂಬಿಕೆಗಳಿಗೇ ಅಂಟಿಕೊಳ್ಳುವ ಒಂದು ತೀವ್ರ ಬಯಕೆ. ಇಂದಿನ ದಿನಗಳಲ್ಲಿ ಕಂಡುಬರುತ್ತಿರುವ ಅನೇಕ ಭಯೋತ್ಪಾದಕ ಗುಂಪುಗಳು ಈ ಅಹಿತಕರ ಬೆಳವಣಿಗೆಗೆ ಸಾಕ್ಷಿ. ಆದ್ದರಿಂದ ನಾವು ಬಯಸುವ ಸಂಗ, ಸ್ನೇಹ ನಮ್ಮನ್ನು ಉತ್ತಮ ಗುರಿಯೆಡೆಗೆ ಕೊಂಡೊಯ್ಯುವಂತಹದಾಗಬೇಕು.

ಇದಕ್ಕೆ ಮತ್ತೊಂದು ಆಯಾಮವಿದೆ. ನಾವು ವ್ಯಕ್ತಿಗಳ ಸ್ನೇಹ ಬಯಸುವಂತೆ ವಸ್ತುಗಳ ಸ್ನೇಹವನ್ನೂ ಬಯಸುತ್ತೇವೆ. ಅದು ಉಪಯುಕ್ತ ವಸ್ತುವಾದರೆ ಅದರಲ್ಲಿ ಸ್ನೇಹ ಹೆಚ್ಚಾಗುತ್ತದೆ. ವ್ಯಕ್ತಿಗಳ ಸ್ನೇಹ ದೊರೆಯದಿದ್ದರೆ ವಸ್ತುಗಳಲ್ಲೇ ಈ ಸ್ನೇಹವನ್ನು ಬಯಸಿ ಅವುಗಳ ಸಂಗ್ರಹಣೆ, ಪಾಲನೆಯಲ್ಲೇ ತೃಪ್ತಿಪಡುವವ ರಿದ್ದಾರೆ. ಮನೆಯನ್ನು ಸಂಗ್ರಹಾಲಯದಂತೆ, ಉಗ್ರಾಣದಂತೆ ವಸ್ತುಗಳಿಂದ ತುಂಬಿಸಿಟ್ಟು ಅದರಲ್ಲೇ ಮಗ್ನರಾಗಿರುವವರು ಕೆಲವರು. ಈಗಿನ ಕಾಲದಲ್ಲಂತೂ ಮೊಬೈಲ್ ಫೋನ್ ಕೈಯಲ್ಲಿದ್ದರೆ ಎಲ್ಲವನ್ನೂ ಮರೆತು ಅದರಲ್ಲೇ ತಲ್ಲೀನರಾಗಿ ಬಿಡುತ್ತಾರೆ. ಪಕ್ಕದಲ್ಲಿರುವವರು ಏನು ಹೇಳುತ್ತಿದ್ದಾರೆ ಎಂಬು ದರ ಗೊಡವೆಯೇ ಇರುವುದಿಲ್ಲ. ಇದೂ ಕೂಡ ಒಂದು ರೀತಿಯ ಪಿಡುಗು. ಒಬ್ಬ ವ್ಯಕ್ತಿಯಿಂದ ನಾವು ಪಡೆಯಬಹು ದಾದಂತಹ ಭಾವನಾತ್ಮಕ ಸ್ನೇಹಭಾವವನ್ನು ವಸ್ತು ಎಂದೂ ನೀಡದು. ಇದನ್ನು ಪ್ರತಿಯೊಬ್ಬರೂ ಅರಿಯುವುದು ಆವಶ್ಯಕ. ನಾವು ಮಾನವರೊಂದಿಗೆ ಸ್ನೇಹಸಂಪರ್ಕವನ್ನು ಬೆಳೆಸಿಕೊಳ್ಳು ವಲ್ಲಿ ವಿಫಲರಾದರೆ ಕಷ್ಟಗಳು ಎದುರಾದಾಗ, ಆರೋಗ್ಯ ಕ್ಷೀಣಿಸಿದಾಗ ಏಕಾಂಗಿತನ ಕಾಡುವುದು ನಿಶ್ಚಿತ. ಕಣ್ಣು, ಕಿವಿಗಳು ತಮ್ಮ ಸಾಮರ್ಥ್ಯವನ್ನು ಕಳೆದುಕೊಂಡಾಗ ವಸ್ತುಗಳು ಜೊತೆ ನೀಡವು. ಮಾನವನ ಸ್ಪರ್ಶ, ಪ್ರೀತಿಯ ಸ್ಪಂದನ ಎಷ್ಟೋ ವರ್ಷಗಳ ದುಗುಡ ದುಃಖಗಳನ್ನು ಹೋಗಲಾಡಿಸುವ ಶಕ್ತಿಯನ್ನು ಹೊಂದಿವೆ. ಕಷ್ಟ ನಷ್ಟಗಳಲ್ಲಿ ಸ್ಪಂದಿಸುವ ಸೇವಾ ಗುಣ ಹೊಮ್ಮುವುದು ಈ ಸಂಗಪ್ರವೃತ್ತಿಯಿಂದ. ಅದ್ದರಿಂದ ಇದನ್ನು ಸಕಾರಾತ್ಮಕವಾಗಿ ಬಳಸಿದಾಗ ಸಮಾಜದ ಹಿತವೂ ಸಾಧ್ಯ, ನಮ್ಮ ವೈಯಕ್ತಿಕ ಸುಖವೂ ಸಾಧ್ಯ.

> **ಹುಟ್ಟೋದು ಸುಲಭ, ಸಾಯೋದು ಸುಲಭ, ಬದುಕೋದು ಕಷ್ಟ.** —*ದ.ರಾ.ಬೇಂದ್ರೆ*

೫. ತಿಳಿಯುವ ಪ್ರವೃತ್ತಿ:

ಇತರ ಪ್ರಾಣಿಗಳಲ್ಲಿ ಇಲ್ಲದ ವಿಶೇಷವಾದ ಒಂದು ಮೂಲಭೂತ ಪ್ರಚೋದನೆ ಇದು. ಮಾನವ ಹೆಚ್ಚು ಹೆಚ್ಚು ಜ್ಞಾನವನ್ನು ಪಡೆಯಲು ಸಹಜವಾಗಿಯೇ ಬಯಸುತ್ತಾನೆ. ಬೇರೆಯವರ ಹಾವ-ಭಾವಗಳಿಂದ, ಮಾತುಗಳಿಂದ, ಸನ್ನಿವೇಶಗಳಿಂದ—ಹೀಗೆ ಮಾನವನ ಕಲಿಕೆ ಕೇವಲ ವಿದ್ಯಾಭ್ಯಾಸಕ್ಕೆ ಮಾತ್ರ ಸೀಮಿತವಲ್ಲ. ಇದೊಂದು ನಿರಂತರ ಪ್ರಕ್ರಿಯೆ. ಸದಾ ಹೊಸದನ್ನು ಬಯಸುತ್ತ ಮಾನವನು ಪರಿಸರ, ವ್ಯಕ್ತಿಗಳನ್ನು ವಿಶ್ಲೇಷಿಸಿ ತನ್ನ ಜ್ಞಾನವನ್ನು ಬೆಳೆಸಿ ಕೊಳ್ಳುತ್ತ ಬಂದಿದ್ದಾನೆ. ಅದರ ಪರಿಣಾಮವಾಗಿ ಇಂದು ಎಷ್ಟು ವಿಧವಾದ ಶಾಸ್ತ್ರವಿಭಾಗಗಳು ಬೆಳೆದಿವೆ! ಈ ಪ್ರಚೋದನೆಯಿಂದಾಗಿ ಸಂಶೋಧನೆ, ಆವಿಷ್ಕಾರಗಳನ್ನು ಸಾಧಿಸಿ ಮಾನವ ಮುಂದುವರಿದಿದ್ದಾನೆ. ಜೀವನದಲ್ಲಿ ಎಲ್ಲ ರೀತಿಯ ಸುಖಸೌಲಭ್ಯಗಳನ್ನೂ ಕಲ್ಪಿಸಿಕೊಂಡಿದ್ದಾನೆ. ಆದರೆ ಅಣ್ವಸ್ತ್ರಗಳಂತಹ ಮಾರಕ ಅಸ್ತ್ರಗಳನ್ನೂ ತಯಾರಿಸಿ ಈ ಸಾಮರ್ಥ್ಯವನ್ನು ದುರುಪಯೋಗ ಪಡಿಸಿಕೊಂಡಿದ್ದಾನೆ. ಧರ್ಮ, ಜನಾಂಗ, ರಾಷ್ಟ್ರಪ್ರೇಮ, ಹಿರಿಮೆಗಳ ಹೆಸರಿನಲ್ಲಿ ಇತರ ಮಾನವರನ್ನು ಕೊಲ್ಲುವ ಅಮಾನವೀಯ ನಡತೆ

> ಗುರಿ ಉನ್ನತವಾಗಿದ್ದರೆ ಸೋಲು ಕೂಡ ಶ್ಲಾಘ್ಯ. ಕೆಲವು ಸಂದರ್ಭಗಳಲ್ಲಿ ಅನಿವಾರ್ಯ ಕಾರಣಗಳಿಂದ ಜಯ ಸಿಗದಿರಬಹುದು. ಆದರೆ ಗುರಿಯಿಂದ ಪ್ರಯೋಜನವಿಲ್ಲದಿಲ್ಲ. ಗುರಿಗೆ ಹೇಗೋ ಹಾಗೆ ದಾರಿಗೂ ಅದರದೇ ಆದ ಮೌಲ್ಯ ಉಂಟು. ಒಬ್ಬ ವ್ಯಕ್ತಿ ದೇವರ ಸಾಕ್ಷಾತ್ಕಾರಕ್ಕಾಗಿ ತಪಸ್ಸು ಮಾಡುತ್ತಾನೆ ಎಂದಿಟ್ಟುಕೊಳ್ಳೋಣ; ಸಾಕ್ಷಾತ್ಕಾರವಾಗದಿದ್ದರೆ, ಅವನ ತಪಸ್ಸು ವ್ಯರ್ಥವೆಂದು ತಿಳಿಯಬೇಕಿಲ್ಲ. ತನಗೆ ತಾನೆ ಒಂದು ಗುರಿ, ತಪಸ್ಸು.... ಜೀವನದ ಗರಡಿಯಲ್ಲಿ ಎಲ್ಲರೂ ಸಾಮು ಮಾಡಬೇಕು; ಸಾಧನೆ ಮಾಡಬೇಕು. ಬಹುತೇಕ ಜಯ ದೊರಕುತ್ತದೆ. ಪರಾಭವದಿಂದ ನಷ್ಟವಿಲ್ಲ.
>
> **– ಡಾ. ಸಿ.ಪಿ.ಕೆ.**

ಮಾನವನ ಆತ್ಮರಕ್ಷಣೆ, ಆತ್ಮಾಭಿವ್ಯಕ್ತಿಗಳ ವಿಕೃತ ರೂಪವೂ ಆಗಿರುತ್ತದೆ.

ಮನುಷ್ಯನ ಈ ತಿಳಿಯುವ ಬಯಕೆಯನ್ನು 'ಜಿಜ್ಞಾಸಾ' ಎಂದು ಕರೆಯಲಾಗಿದೆ. ಈ ತಿಳಿಯುವುದಕ್ಕೆ ಕೊನೆಯೇ ಇಲ್ಲವೇ? ಹೀಗೆ ಜ್ಞಾನವನ್ನು ಅರಸುವುದರಿಂದ ಏನು ಪ್ರಯೋಜನ ಎಂಬ ಪ್ರಶ್ನೆ ಕೆಲವರಿಗೆ ಬರಬಹುದು. ತಿಳಿಯುವುದರಲ್ಲಿ, ಮನಸ್ಸನ್ನು ವಿಕಾಸಗೊಳಿಸಿಕೊಳ್ಳುವುದರಲ್ಲಿ, ನಮ್ಮಲ್ಲಿರುವ ಅಜ್ಞಾನದ ಕತ್ತಲೆಯನ್ನು ದೂರಮಾಡಿಕೊಳ್ಳುವುದರಲ್ಲಿ ಆನಂದವಿದೆ. ವಿದ್ಯೆಯ ಕಲಿಕೆ ನೀರಸವಲ್ಲ; ಕೇವಲ ಜೀವನೋಪಾಯಕ್ಕಾಗಿ, ವೃತ್ತಿ ಅಥವಾ ಕಸುಬಿಗಾಗಿ ಮಾಡುವ ಒಂದು ಬೇಸರದ ಕ್ರಿಯೆಯಲ್ಲ. ಜ್ಞಾನ ನಮ್ಮನ್ನು ಮಾನವರನ್ನಾಗಿ ಮಾಡುತ್ತದೆ. ಹಾಗೂ ಈ ಜ್ಞಾನ ಅದು ಲೌಕಿಕವೇ ಆಗಿರಲಿ ಪಾರಮಾರ್ಥಿಕವೇ ಆಗಿರಲಿ, ಕಡೆಯಲ್ಲಿ ನಮ್ಮನ್ನು ಪರಿಪೂರ್ಣತೆಯತ್ತ ಕೊಂಡೊಯ್ಯಲೇಬೇಕು. ಎಲ್ಲ ಜ್ಞಾನವೂ ಒಂದೇ ತತ್ತ್ವದಲ್ಲಿ ಪರಿಸಮಾಪ್ತಿಯನ್ನು ಹೊಂದುತ್ತದೆ ಎಂದು ವೇದಾಂತ ಹೇಳುತ್ತದೆ. **ಯಂ ಜ್ಞಾತ್ವಾ ಸರ್ವಂ ಇದಂ ವಿಜ್ಞಾತಂ ಭವತೀತಿ**—"ಯಾವ ಒಂದನ್ನು ತಿಳಿಯುವುದರಿಂದ ತಿಳಿಯಬೇಕಾದ್ದೆಲ್ಲವನ್ನೂ ತಿಳಿಯಬಹುದೋ, ಅಂತಹ ಜ್ಞಾನವನ್ನು ಪಡೆಯಬೇಕು" ಎಂದು ಉಪನಿಷತ್ತು ಹೇಳುತ್ತದೆ. ಎಲ್ಲ ಜ್ಞಾನವೂ ನಮ್ಮ ಅಂತರಂಗದಿಂದಲೇ ಹೊಮ್ಮುವುದರಿಂದ ಕೇವಲ ಅದನ್ನು ಹೊರಗೆಡಹುವ ಪ್ರಯತ್ನವನ್ನು ನಾವು ಮಾಡಬೇಕು ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಜಾತಿ ಪಂಗಡಗಳ ಭೇದಗಳ ಹೆಸರಿನಲ್ಲಿ ವಿದ್ಯೆಯಿಂದ ವಂಚಿತರಾಗಿ ಶತಮಾನಗಳ ಕಾಲ ದುಃಖಮಯ ಜೀವನವನ್ನೇ ನಡೆಸಿರುವ ನಮ್ಮ ಸಮಾಜದ ಅನೇಕರಿಗೆ ಈಗ ಸೌಲಭ್ಯಗಳು ದೊರೆಯುತ್ತಿದ್ದು, ತ್ವರಿತಗತಿಯಲ್ಲಿ ಅವರು ಮುಂದೆ ಬರುತ್ತಿರುವುದನ್ನು ಕಂಡಾಗ, ಪ್ರತಿಯೊಬ್ಬ ಮಾನವನಲ್ಲಿಯೂ ಈ ಕಲಿಕೆಯ ಬಯಕೆ ಇರುವುದರಿಂದಲೇ ಇದು ಸಾಧ್ಯವಾಗಿದೆಯೆಂದು ತಿಳಿಯಬಹುದು.

ಈ ಎಲ್ಲ ನೈಸರ್ಗಿಕ ಪ್ರಚೋದನೆಗಳು ಮಾನವನ ಕ್ರಿಯೆಯ ಹಿಂದಿರುವ ಶಕ್ತಿಗಳು. ಅವನ್ನು ತಿಳಿಯದೆ, ಸರಿಯಾಗಿ ಬಳಸದೆ ಜೀವಿಸಿದಾಗ ಅವನ ವೈಯಕ್ತಿಕ ಜೀವನಕ್ಕೂ ಮಾರಕವಾಗಿ ಸಮಾಜಕ್ಕೂ ಪಿಡುಗಾಗಿ ಪರಿಣಮಿಸುತ್ತವೆ. ಅರ್ಜುನ ಶ್ರೀಕೃಷ್ಣನನ್ನು ಕೇಳುತ್ತಾನೆ:

ಅಥ ಕೇನ ಪ್ರಯುಕ್ತೋಽಯಂ ಪಾಪಂ ಚರತಿ ಪೂರುಷಃ ।
ಅನಿಚ್ಛನ್ನಪಿ ವಾರ್ಷ್ಣೇಯ ಬಲಾದಿವ ನಿಯೋಜಿತಃ ॥

—"ಈ ಪುರುಷನು ತಾನು ಇಚ್ಛಿಸದಿದ್ದರೂ ಬಲಾತ್ಕಾರದಿಂದ ಪ್ರೇರಿತವಾದವನಂತೆ, ಯಾವುದರಿಂದ ಪಾಪದಲ್ಲಿ ತೊಡಗುತ್ತಾನೆ?" ಅದಕ್ಕೆ ಕೃಷ್ಣ ಹೇಳುವ ಉತ್ತರ, ಆ ಎಲ್ಲ ಪ್ರಚೋದನೆಗಳನ್ನೂ ಸಂಗ್ರಹರೂಪದಲ್ಲಿ ತಿಳಿಸುವಂತಿದೆ: **ಕಾಮ ಏಷ ಕ್ರೋಧ ಏಷ ರಜೋಗುಣ ಸಮುದ್ಭವಃ**—"ತೀವ್ರವಾದ ಬಯಕೆಯಿಂದ (ರಜೋಗುಣ) ಹುಟ್ಟುವ ಕಾಮ, ಕ್ರೋಧಗಳೇ ಇದಕ್ಕೆ ಕಾರಣ." ಈ ರಜೋಗುಣದಿಂದ ಸತ್ತ್ವ ಗುಣಕ್ಕೆ ಏರಬೇಕಾದರೆ, ದೈವೀ ಗುಣಗಳನ್ನು ನಮ್ಮದಾಗಿಸಿಕೊಳ್ಳಬೇಕಾದರೆ, ಈ ನೈಸರ್ಗಿಕ ಪ್ರಚೋದನೆಗಳನ್ನು ಗುರುತಿಸಿಕೊಂಡು, ಅವುಗಳನ್ನು ನಮ್ಮ ವ್ಯಕ್ತಿತ್ವದ ಸಕಾರಾತ್ಮಕ ಭಾಗಗಳಾಗಿ ಪರಿವರ್ತಿಸಿಕೊಳ್ಳಬೇಕು. ಆಗ ಮಾತ್ರ ಎಲ್ಲ ಕ್ಷೇತ್ರಗಳಲ್ಲೂ, ಎಲ್ಲ ಹಂತಗಳಲ್ಲೂ ಮಾನವ ಸುಖ, ನೆಮ್ಮದಿಗಳನ್ನು ಕಾಣಬಲ್ಲ. ಈ ವಿವೇಚನೆ ಧೀರನಾದವನಿಗೆ ಮಾತ್ರ ಲಭ್ಯವೆಂದು ಕಠೋಪನಿಷತ್ತು ಹೇಳುತ್ತದೆ:

**ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತಸ್ತೌ ಸಂಪರೀತ್ಯ ವಿವಿನಕ್ತಿ ಧೀರಃ**—"ಶ್ರೇಯಸ್ಸು (ಚಿರಂತನವಾಗಿ ಒಳಿತನ್ನೇ ತರುವಂತಹ ಮಾರ್ಗ), ಪ್ರೇಯಸ್ಸು (ತಾತ್ಕಾಲಿಕವಾದ ಲೌಕಿಕ ಅಭ್ಯುದಯವನ್ನು ನೀಡುವ ಮಾರ್ಗ)—ಇವು ಮನುಷ್ಯನ ಸಮೀಪಕ್ಕೆ ಬರುತ್ತವೆ. ಧೀಮಂತನು (ತನ್ನ ಪ್ರವೃತ್ತಿಗಳನ್ನು ಬದಿಗೊತ್ತಿ ಮುನ್ನಡೆಯಲು ಪ್ರಯತ್ನಿಸುವವನು) ಅವುಗಳನ್ನು ಚೆನ್ನಾಗಿ ಪರಿಶೀಲಿಸಿ ವಿವೇಚಿಸುತ್ತಾನೆ." ಇಂತಹ ಧೀರರಾಗಿ ದೃಢ ಹೆಜ್ಜೆಯಿಂದ ಕುಂದುಕೊರತೆಗಳನ್ನು ತೊರೆದು ವಿಶಾಲವಾಗುತ್ತ ಕಾರ್ಯಕ್ಷೇತ್ರವನ್ನು ಮಾತ್ರವಲ್ಲ, ಇಡೀ ಜೀವನವನ್ನೇ ಸಮರ್ಪಕವಾಗಿ ನಿರ್ವಹಿಸುವ ಕಲೆಯನ್ನು ಕಲಿಯಬೇಕು.

(ಮುಂದುವರಿಯುತ್ತದೆ)